<u>ಸ್ಪೆಷಲ್ ಕೇಸ್ ನಂ. 362/2018</u>

<u>ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 03.08.2023</u>

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

1. ನಮ್ಮ ಗ್ರಾಮದಲ್ಲಿ ಸುಮಾರು 6-7 ಸಾವಿರ ಜನಸಂಖ್ಯೆ ಇದೆ ಎಂದರೆ ಸರಿ.ಅದರಲ್ಲಿ ನಮ್ಮ ಜನಾಂಗದವರು ಸುಮಾರು 500 ಜನ ಇದ್ದಾರೆ. ನಮ್ಮ ಬೀದಿಯ ಎರಡು ಬದಿಗಳಲ್ಲಿ ನಮ್ಮ ಜನಾಂಗದವರೇ ವಾಸ ಇದ್ದಾರೆ. ವಳಗೆರಹಳ್ಳಿ ಗ್ರಾಮದ ಮಧ್ಯದಲ್ಲಿ ನಮ್ಮ ಜನಾಂಗದವರು ವಾಸ ಮಾಡುತ್ತಾರೆ. ನಮ್ಮ ಮನೆಯಿಂದ 50 ಅಡಿ ದೂರದಲ್ಲಿ ಬಸ್ ನಿಲ್ದಾಣ ಇದೆ. ನಮ್ಮ ಮನೆಯ ಹತ್ತಿರ ದೇವಸ್ಥಾನ, ಅರಳೀಮರ, ಚಿಕನ್ ಅಂಗಡಿ, ಪೆಟ್ಟಿ ಅಂಗಡಿಗಳು ಇವೆ. ನಮ್ಮ ಮನೆಯ ಮುಂದೆ ಬಿಳಿಯಯ್ಯ ಷೆಡ್ ಇದೆ. ನಮ್ಮ ಮನೆಯ ಮುಂಭಾಗ ವಸಂತ, ಗುರುನಾಥ, ಜಯಮ್ಮ ಪುಟ್ಟಮ್ಮ ರಮೇಶ, ಭಾರತಿ ಇವರುಗಳ ಮನೆಗಳು ಇವೆ. ಅದೇ ರೀತಿ ನಮ್ಮ ಮನೆಯ ಪಕ್ಕದಲ್ಲಿ ರಜಿನಿ, ಕಾಮರಾಜು, ರಾಮಯ, ಬಾಲು, ದೇವರಾಜ, ಮನು, ಕೆಂಚಯ ಇವರುಗಳ ಮನೆಗಳು ಇವೆ. ಎಲ್ಲಾ ಜನರು ಅವರ ಸಂಸಾರ ಸಮೇತ ವಾಸವಿದ್ದಾರೆ ಎಂದರೆ ಸರಿ. ನಮ್ಮ ಮನೆಯಲ್ಲಿ ನನ್ನ ತಂದೆ, ತಾಯಿ ವಾಸ ಇದ್ದು, ಅದು ಆರ್ ಸಿ ಸಿ ಮನೆಯಾಗಿರುತ್ತದೆ. ಹಿಂದೆ ಆ ಮನೆ ಹೆಂಚಿನ ಮನೆಯಾಗಿದ್ದು, ಅಲ್ಲೇ ನಾನು ವಾಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಅದರ ಮುಂದೆ ಇರುವ ಮನೆಯಲ್ಲಿ ವಾಸ ಮಾಡುತ್ತಿದ್ದೆ.

2. ನಿಪಿ.3 ಹಾಗೂ 4 ಪೊಟೋದಲ್ಲಿ ಕಂಡುಬರುವ ಖಾಲಿ ಜಾಗ ಹಿಂದೆ 2001-02 ನೇ ಸಾಲಿನಲ್ಲಿ ಶಂಕರಯ್ಯ ರವರಿಗಸಿ ಮಂಜೂರು ಆಗಿತ್ತು ಎಂದರೆ ಸರಿ. ಸದರಿಯವರಿಗೆ ಮನೆ ಕಟ್ಟಿಕೊಳ್ಳಲು ಅನುಮತಿ ಕೊಟ್ಟಿದ್ದರು. ಈ ಸಂಬಂಧ ಸರ್ಕಾರದಿಂದ ಒಂದು ಕಂಡು ಹಣ ಬಿಡುಗಡೆ ಆಗಿತ್ತು. ಈ ಸಂದರ್ಭದಲ್ಲಿ ಶಂಕರಯ ಪಕ್ಕದ ಹಳ್ಳಿಯಲ್ಲಿ ವಾಸಾ ಇದ್ದರಿಂದ ಹಣ ಬಿಡುಗಡೆ ಆದದ್ದನ್ನು ಸರ್ಕಾರದವರು ವಾಪಸ್

ಪಡೆದುಕೊಂಡಿದ್ದರು. ಪಕ್ಕದ ಊರಿಗೆ ಸೇರಿಕೊಂಡಿದ್ದರಿಂದ ಹಿಂದೆ ಆ ಸ್ವತ್ತನ್ನು ಪಂಚಾಯಿತಿಯವರು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ ನಾನು ಅಲ್ಲಿ ವಾಸ ಮಾಡುತ್ತಿದ್ದೇನೆ.

3. ಆಸ್ತಿ ಸಂಖ್ಯೆ 1025 ನನಗೆ ಸೇರಿದ್ದು ಎಂಬುದಕ್ಕೆ ಯಾವುದೇ ದಾಖಲೆ ಇಲ್ಲ. ಸದರಿ ಆಸ್ತಿ ಮಾಲೀಕರು ದಾಖಲಾತಿಗಳ ಪ್ರಕಾರ ಪಂಚಾಯಿತಿಗೆ ಸೇರಿದ್ದು, ಅದರಲ್ಲಿ ನಾನು ಸ್ವಾಧೀನದಲ್ಲಿದ್ದೇನೆ. ಸದರಿ ಆಸ್ತಿ ಪಂಚಾಯಿತಿಗೆ ಸೇರಿದ್ದು ಎಂದು ಮನೆಯ ಮುಂದೆ ಬೊರ್ಡ್ ಹಾಕಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಸವಿತಾ ಸಮಾಜದವರಿಗೆ ಕ್ಷೌರ ಮಾಡುವ ಸಲುವಾಗಿ ಪಂಚಾಯಿತಿಯವರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆಗ ನಮ್ಮ ಮನೆಯವರು ಅದಕ್ಕೆ ವಿರುದ್ಧ ವ್ಯಕಪಡಿಸಿದ್ದೆವು ಎಂದರೆ ಗೊತ್ತಿಲ್ಲ. ಸದರಿ ಅಸ್ತಿ ಸಂಬಂಧ ನನ್ನ ಹಾಗೂ ಪಂಚಾಯಿತಿ ನಡುವೆ ವಿವಾದ ಇದೆ ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ಮಾಲೀಕತ್ವಕ್ಕೆ ಒಳಪಟ್ಟಿದೆ ಎಂದು ತೋರಿಸಲು ಪಂಚಾಯಿತಿ ನೀಡಿರುವ ಯಾವುದೇ ದಾಖಲೆ ನನ್ನ ಬಳಿ ಇಲ್ಲ.

4. ಈ ವಿಚಾರದಲ್ಲಿ ಆರೋಪಿ ನಾರಾಯಣ ನನ್ನ ತಾಯಿ ವಿರುದ್ಧ ಸದರಿ ಆಸ್ತಿ ಅವರಿಗೆ ಸೇರಬೇಕೆಂದು ಓ ಎಸ್ 86/2002 ನ್ನು ಹಾಕಿದ್ದರು ಎಂದರೆ ಸರಿಯಲ್ಲ. ದಾವೆ ತೀರ್ಮಾನವಾಗಿ ಸದರಿ ಆಸ್ತಿ ಪಂಚಾಯಿತಿಗೆ ಸೇರಿದ್ದು ಎಂದು ತೀರ್ಮಾನ ಆಗಿರುತ್ತಂದೆ ಎಂದರೆ ಸರಿಯಲ್ಲ. ಅಂದಿನಿಂದ ಸದರಿ ಆಸ್ತಿ ಪಂಚಾಯಿತಿಗೆ ಸೇರಿದ್ದು ಎಂದರೆ ನಾನು ಸ್ವಾಧೀನದಲ್ಲಿದ್ದೇನೆ. ಸದರಿ ಜಾಗವನ್ನು ತೆರವುಗೊಳಿಸಲು ನನಗೆ ಪಂಚಾಯಿತಿಯಿಂದ ಹಲವಾರು ಬಾರಿ ನೋಟಿಸು ಕೊಟ್ಟಿದ್ದು ಅದನ್ನು ನಮ್ಮ ಕುಟುಂಬದವರು ತಿರಸ್ಕರಿಸುತ್ತೇವೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಅಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ಸುಳ್ಳು ದೂರನ್ನು ಕೊಟ್ಟಿರುತ್ತೇವೆಂದರೆ ಸರಿಯಲ್ಲ.

5. ಸದರಿ ಆಸ್ತಿ ವಿಚಾರದಲ್ಲಿ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಪಿಡಿಓ ಹಾಗೂ ಜಿಲ್ಲಾ ಪಂಚಾಯಿತಿಗೆ ದೂರು ಕೊಟ್ಟಿದ್ದೆ ಎಂದರೆ ಸರಿ. ಈ ಬಗ್ಗೆ ಮೇಲಾಧಿಕಾರಿಗಳು ಸ್ಥಳಕ್ಕೆ ಬಂದು ಪರಿಶೀಲಿಸಿ ವರದಿ ತಯಾರು ಮಾಡಿದ್ದರು ಎಂದರೆ ಸರಿ. ಅದರ ಪ್ರಕಾರ ಆಸ್ತಿ ಸಂಖ್ಯೆ 1025 ಪಂಚಾಯಿತಿಗೆ ಸೇರಿದ್ದು ಎಂದು ವರದಿ ಕೊಟ್ಟಿರುತ್ತಾರೆಂದರೆ ಗೊತ್ತಿಲ್ಲ. ಅದೇ ರೀತಿ ಜಾಗವನ್ನು ಅತೀಕ್ರಮಣ ಮಾಡಬಾರದು ಎಂದು ಪಂಚಾಯಿತಿ ಅಧಿಕಾರಿಗಳು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಆ ಜಾಗ ನನಗೆ ಸೇರಿದ್ದು ಎಂದು ಟಿಕಾಣಿ ಹೂಡಿದ್ದೆ ಎಂದರೆ ಆ ಜಾಗದಲ್ಲಿ ನಾನು ವಾಸವಿದ್ದೇನೆ. ಜಾಗ ಖಾಲಿ ಮಾಡಿಕೊಡಿ ಎಂದು ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ, ಮುಂದುವರೆದು ಸ್ಥಳಕ್ಕೆ ಬಂದಿರುವುದು ನಿಜ ಆದರೆ ಕ್ಷೌರ ಅಂಗಡಿ ತೆಗೆಯುವ ಸಂಬಂಧ ಬಂದಿದ್ದರು. ಆ ಸಮಯದಲ್ಲಿ ಆಗಲೇ ನನಗೆ ಸದರಿ ಆಸ್ತಿ ಸವಿತಾ ಸಮಾಜಕ್ಕೆ ಕ್ಷೌರ ಮಾಡಲು ಪಂಚಾಯಿತಿಯಿಂದ ತೀರ್ಮಾನ ಆದ ಬಗ್ಗೆ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಅವರನ್ನು ತಡೆದು ಅವರ ಕರ್ತವ್ಯಕ್ಕೆ ಅಡ್ಡಿ ಮಾಡಿದೆ ಎಂದು ನನ್ನ ವಿರುದ್ಧ ದೂರು ಕೊಟ್ಟಿರುತ್ತಾರೆಂದರೆ ಸುಳ್ಳು ದೂರು ಕೊಟ್ಟಿದ್ದಾರೆ. ಆ ಜಾಗದಲ್ಲಿ ನಾನು ವಾಸವಿರಲಿಲ್ಲ ಅದು ವಾಸಕ್ಕೆ ಯೋಗ್ಯವಾದ ಜಾಗ ಅಲ್ಲ ಎಂದರೆ ಸರಿಯಲ್ಲ. ನಿಪಿ.3 ಹಾಗೂ 4 ಫೋಟೋದಲ್ಲಿ ಮೂಲ ಮಾಲೀಕ ಶಂಕರಯ್ಯ ಯಾವ ರೀತಿ ಮನೆ ಕಟ್ಟಿದ್ದರೋ ಅದೇ ರೀತಿ ಈಗಲೂ ಇದೆ ಎಂದರೆ ಸರಿಯಲ್ಲ. ಸದರಿ ಫೋಟೋಗಳಲ್ಲಿ ಮನೆಗೆ ಪ್ಲಾಸ್ಟರಿಂಗ್ ಮಾಡಿರುವುದು, ಬಾಗಿಲು ಇಲ್ಲದೇ ಇರುವುದು ಕಂಡು ಬಂದಿದ್ದು ಅದು ವಾಸಕ್ಕೆ ಯೋಗ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ, ತಾಯಿ ಹಿಂದೆ ವಾಸ ಮಾಡುತ್ತಿದ್ದ ಮನೆಯ ಮುಂದೆ ನಿಪಿ.3 ಹಾಗೂ 4 ಫೋಟೋದಲ್ಲಿರುವ ಮನೆ ಆಗಿರುತ್ತದೆ ಎಂದರೆ ಸರಿ. ಖಾಲಿ ಜಾಗದಲ್ಲಿ ಆಟೋ, ಬೈಕು, ದನಕರುಗಳನ್ನು ಕಟ್ಟಿಹಾಕುತ್ತಿರದ್ದರು ಎಂದರೆ ಸರಿ. ಆ ಜಾಗವನ್ನು ಹೇಗಾದರೂ ಮಾಡಿ ಲಪಟಾಯಿಸಿಕೊಂಡು ಅದನ್ನು ಉಳಿಸಿಕೊಳ್ಳುವ ಸಲುವಾಗಿ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗಾಗಲೀ, ನನ್ನ ತಂದೆ,

ತಾಯಿಗಾಗಲೀ ಹಲ್ಲೆ ಮಾಡಿ, ಅವ್ಯಾಚ ಶಬ್ಧದಿಂದ ಬೈದು ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

6. ದಿನಾಂಕ **31.08.2017** ರಂದು ಪಿಡಿಓ ಹಾಗೂ ಪಂಚಾಯಿತಿ ಅಧಿಕಾರಿಗಳು ಸ್ಥಳಕ್ಕೆ ಬಂದಾಗ ಪೊಲೀಸರು ಇದ್ದರು ಎಂದರೆ ನಾನು ಪೋನು ಮಾಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದರು. ದೂರು ಕೊಡುವ ಪೂರ್ವದಲ್ಲಿ ಗ್ರಾಮಕ್ಕೆ ಪೊಲೀಸರು ಬಂದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಘಟನೆ ಬಗ್ಗೆ ಪೊಲೀಸರಿಗೆ ಸ್ಥಳದಲ್ಲಿ ದೂರು ಕೊಡಲಿಲ್ಲ ಎಂದರೆ ಸರಿ. ಪಂಚಾಯಿತಿಯವರು ಕಾನೂನಿನ ಪ್ರಕಾರ ನನ್ನನ್ನು ತೆರವುಗೊಳಿಸಲು ಬಂದಾಗ ಸುಮಾರು **100** ರಿಂದ **200** ಜನರು ಜಮಾಯಿಸಿದ್ದು ಕಂಡು ಬಂದಿತ್ತು ಎಂದರೆ ಸರಿ. ಆಗ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಆಗ ಪಂಚಾಯಿತಿ ಅಧಿಕಾರಿಗಳು ಹಾಗೂ ಜನರು ಪರಸ್ಪರ ಮಾತನಾಡಿದರು ಎಂದರೆ ಸರಿ. ಸ್ಥಳದಲ್ಲಿದ್ದ ಅಧಿಕಾರಿಗಳು ಪೊಲೀಸರಿಗೆ ಪಂಚಾಯಿತಿ ಆದೇಶದನ್ವಯ ಸ್ಥಳಕ್ಕೆ ಬಂದಿರುತ್ತೇವೆಂದು ಮನವರಿಕೆ ಮಾಡಿಕೊಡುತ್ತಿದ್ದರು ಎಂದರೆ ಸರಿ. ಪಿಡಿಓ ಹಾಗೂ ಪೊಲೀಸರು ಇದ್ದಾಗ ಆಸ್ತಿ ಸಂಖ್ಯೆ **1025** ನನಗೆ ಸಂಬಂಧಿಪಟ್ಟಿದ್ದು ಎಂದು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸರಿ. ಪಿಡಿಓ ರವರು ಕಾನೂನಿನ ಪ್ರಕಾರ ಸ್ಥಳಕೆ ಬಂದಾಗ ನಾನು ವಿರೋಧ ವ್ಯಕ್ತಪಡಿಸಿದ್ದೆ ಎಂದರೆ ಕಾನೂನಿನ ಪ್ರಕಾರ ಬಂದಿರಲಿಲ್ಲ. ಆಸ್ತಿ ನನಗೆ ಸಂಬಂಧಪಟ್ಟಿದ್ದು ಎಂದು ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿಲ್ಲ. ಪಿಡಿಓ ಹಾಗೂ ಸಿಬ್ಬಂದಿಯವರು ಸ್ಥಳಕ್ಕೆ ಬಂದಿದ್ದಾಗ ನಾನು ಅಡ್ಡಪಡಿಸಿದ್ದರಿಂದ ನನ್ನ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸುಳ್ಳು ದೂರು ಕೊಟ್ಟಿದ್ದರು. ಪ್ರತಿರಕ್ಷಣೆಗಾಗಿ ನಾನು ಆರೋಪಿತರ ವಿರುದ್ಧ ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ.

7. ನಾನು ದೂರು ಕೊಡಲು ಠಾಣೆಗೆ ಹೋದಾಗ ಸ್ವತ್ತಿನ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರಲಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ ”ನಮ್ಮ ಊರಿನಲ್ಲಿ ಮೊದಲಿನಿಂದಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ



ಸೇರಿದ ಜನರಿಗೆ ಊರಿನ ಕ್ಷೌರಿಕರು ಕ್ಷೌರ ಮಾಡುತ್ತಿರಲಿಲ್ಲ. ಪೊಲೀಸ್ ಠಾಣೆಯಲ್ಲಿ ಪ್ರತಿ ತಿಂಗಳು ದಲಿತರಿಗೊಂದು ದಿನ ಎಂದು ಒಂದು ಸಭೆ ನಡೆಯುತ್ತದೆ. ಆ ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರುಗಳು ಎಲ್ಲಾ ಭಾಗಿಯಾಗುತ್ತಾರೆ. ನಾನು 1998-2000 ದ ಇಸವಿಯಿಂದಲೂ ಸದರಿ ಸಭೆಗಳಲ್ಲಿ ನಮ್ಮ ಊರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗವದರಿಗೆ ಕ್ಷೌರ ಮಾಡುತ್ತಿಲ್ಲ, ಹಾಗಾಗಿ ನಮಗೂ ಸಹ ಊರಿನಲ್ಲಿ ಕ್ಷೌರ ಮಾಡಿಸಲು ಅವಕಾಶ ಮಾಡಿಕೊಡಿ ಎಂದು ಕೇಳುತ್ತಾ ಬಂದಿದ್ದೆ. 2014 ನೇ ಸಾಲಿನಲ್ಲಿ ಪೊಲೀಸರು ನಮ್ಮ ಗ್ರಾಮ ಪಂಚಾಯಿತಿಗೆ ಒಂದು ಪತ್ರ ಬರೆದು ನಿಮ್ಮ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಕ್ಷೌರ ಮಾಡಲು ಅನುವು ಮಾಡಿಕೊಡಿ ಎಂದು ಪತ್ರ ಬರೆದಿದ್ದರು. ಆದಾದ ನಂತರ ಗ್ರಾಮದಲ್ಲಿ ಸುಮಾರು ಸಭೆಗಳಾದವು. ಸದರಿ ವಿಚಾರ ಬಗೆಹರಿಯಲಿಲ್ಲ. 2017 ನೇ ಇಸವಿಯ 4 ನೇ ತಿಂಗಳಿನಲ್ಲಿ ಡಿ ವೈ ಎಸ್ ಪಿ ರವರ ನೇತೃತ್ವದಲ್ಲಿ ಊರಿನಲ್ಲಿ ಒಂದು ಜಾಗೃತಿ ಸಭೆ ಆಗಿರುತ್ತದೆ. ಆ ಸಭೆಯಲ್ಲಿ ಗ್ರಾಮದ ಸಾರ್ವಜನಿಕರೆಲ್ಲರಿಗೂ ಕ್ಷೌರ ಮಾಡಬೇಕೆಂದು ತೀರ್ಮಾನ ಆಗಿರುತ್ತದೆ ಹಾಗೂ ದೇವಸ್ಥಾನಗಳಿಗೆ ಮುಕ್ತ ಪ್ರವೇಶ ನೀಡಬೇಕೆಂದು ನಿರ್ಧಾರಕ್ಕೆ ಬರಲಾಗಿರುತ್ತದೆ. ಆ ಸಭೆಯಾದ ನಂತರವೂ ಸಹ ಊರಿನಲ್ಲಿ ನಮ್ಮ ಜನಾಂಗದವರಿಗೆ ಕ್ಷೌರ ಮಾಡುತ್ತಿರಲಿಲ್ಲ. ದಿನಾಂಕ 21.07.2017 ರಂದು ನಾನು ಎ ಎಸ್ ಪಿ ರವರಿಗೆ ನಮಗೆ ಊರಿನಲ್ಲಿ ಕ್ಷೌರ ಮಾಡುತ್ತಿಲ್ಲ ಹಾಗಾಗಿ ಮಾಡಲು ಅನುವು ಮಾಡಿಕೊಡುವಂತೆ ಲಿಖಿತವಾಗಿ ಮನವಿ ಸಲ್ಲಿಸಿದ್ದೆ. ನಂತರ ನಾನು ದಿನಾಂಕ 06.07.2017 ರಂದು ನಾನು ನಮ್ಮ ಊರ ಗ್ರಾಮ ಪಂಚಾಯಿತಿಗೆ ನಮ್ಮ ಜನಾಂಗದವರಿಗೂ ಸಹ ಊರಿನಲ್ಲಿ ಕ್ಷೌರ ಮಾಡಲು ಅನುವು ಮಾಡಿಕೊಡುವಂತೆ ಕೋರಿ ಮನವಿಯನ್ನು ಸಲ್ಲಿಸಿದ್ದೆ. ನಂತರ ಪೊಲೀಸರು ಬಂದು ನಮ್ಮ ಜನಾಂಗದವರಿಗೆ ಕಟ್ಟಿಂಗ್ ಶೇವಿಂಗ್ ಮಾಡಲು ನಿರ್ದೇಶನ ನೀಡಿದರೂ ಸಹ ಕಟ್ಟಿಂಗ್ ಮಾಡುವವರು ಒಪ್ಪದೆ ಇದ್ದಾಗ ಅವರನ್ನು ಠಾಣೆಗೆ ಕರೆದುಕೊಂಡು ಹೋದರು. ನಮ್ಮ ಊರಿನ ಸುಮಾರು 60 – 70 ಜನರು ಅಲ್ಲಿಗೆ ಬಂದು ನಮ್ಮ ಊರಿನ ಸಮಸ್ಯೆಯನ್ನು ನಾವೇ

ಬಗೆಹರಿಸಿಕೊಳ್ಳುತ್ತೇವೆ ಹಾಗೂ ನಮ್ಮ ಜನಾಂಗವರಿಗೆ ಕ್ಷೌರ ಮಾಡಿಸಲು ಅನುವು ಮಾಡಿಕೊಡುವಂತೆ ಹೇಳಿ

12

ಠಾಣೆಯಿಂದ ಬಂದಿದ್ದರು. ಆದರೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ದಿನಾಂಕ 27.08.2017 ರಂದು ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮಂಡ್ಯ ಎಸ್ ಪಿ ಕಚೇರಿಯಲ್ಲಿ ದಲಿತ ಮುಖಂಡರುಗಳು ಸಮಕ್ಷಮ ಮೀಟಿಂಗ್ ಆಗಿರುತ್ತದೆ. ಸದರಿ ಸಭೆಯಲ್ಲಿ ನಮ್ಮ ಊರಿನಲ್ಲಿ ಎಲ್ಲಾ ಜನಾಂಗದವರಿಗೂ ಕ್ಷೌರ ಮಾಡಿಸಲು ಅನುವು ಮಾಡಿಕೊಡಬೇಕೆಂದು ತೀರ್ಮಾನ ಮಾಡಿ ಎಸ್ ಪಿ ರವರು ತಮ್ಮ ಅಧೀನ ಅಧಿಕಾರಿಗಳಿಗೆ ಈ ಸಂಬಂಧ ಕ್ರಮ ವಹಿಸಲು ನಿರ್ದೇಶನ ನೀಡಿರುತ್ತಾರೆ” ಎಂದು ನನ್ನ ದೂರಿನಲ್ಲಾಗಲೀ ಅಥವಾ ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಅದೇ ರೀತಿ ನಮ್ಮ ಊರಿನ ಒಂದಷ್ಟೆ ಜನ ನಮ್ಮ ಮನೆಯ ಹೊರಗಡೆ ಇದ್ದರು ಎಂದು ನನ್ನ ದೂರಿನಲ್ಲಾಗಲೀ ಅಥವಾ ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ”ಎಲ್ಲಾ ಆರೋಪಿತರು 1ನೇ ಆರೋಪಿಯೊಂದಿಗೆ ಗುಂಪು ಕಟ್ಟಿಕೊಂಡು ಬಂದು ನಮ್ಮ ಮನೆಯ ಒಳಗೆ ನುಗ್ಗಿ ನಮ್ಮ ಮನೆಯನ್ನು ಕಟ್ಟಿಂಗ್ ಶಾಪ್ ಮಾಡುತ್ತೇವೆ ಎಂದು ಚೇರ್, ಕನ್ನಡಿ, ಬಟ್ಟೆ, ಬಾಚಣಿಗೆ, ಕತ್ತರಿ ಇವುಗಳನ್ನು ತಂದಿದ್ದರು. ಅವುಗಳನ್ನು ನಮ್ಮ ಮನೆಯ ಒಳಗೆ ಇಡಲು ಪ್ರಯತ್ನ ಮಾಡಿದರು. ಅಷ್ಟರಲ್ಲಿ ನಾನು, ನನ್ನ ತಂದೆ ತಾಯಿ ಎಲ್ಲರೂ ಅವರನ್ನು ತಡೆದವು” ಎಂದು ನನ್ನ ದೂರಿನಲ್ಲಾಗಲೀ ಅಥವಾ ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯನ್ನು ಕಟಿಂಗ್ ಶಾಪ್ ಮಾಡುತ್ತೇವೆಂದು ನನ್ನ ದೂರಿನಲ್ಲಾಗಲೀ ಅಥವಾ ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. “1ನೇ ಆರೋಪಿಗೆ ನೋಟೀಸು ಕೊಡದೆಯೇ ಏಕೆ ಈ ರೀತಿ ಮಾಡಿದ್ದೀರಿ ಎಂದು ಪೊಲೀಸರು ಕೇಳಿದರು. 1ನೇ ಆರೋಪಿ ಆಗ 2 ರಿಂದ 8 ಆರೋಪಿತರು ಈ ರೀತಿ ಮಾಡಲು ನನಗೆ ಹೇಳಿದ್ದರಿಂದ ಮಾಡಿರುತ್ತೇನೆ ಎಂದು ಪೊಲೀಸರಿಗೆ ತಿಳಿಸಿದರು. ನಂತರ ಪೊಲೀಸರು ನನ್ನನ್ನು ಊರಿಗೆ 1ನೇ ಆರೋಪಿತನೊಂದಿಗೆ ಕರೆದುಕೊಂಡು ಹೋಗಿ ಕಟ್ಟಿಂಗ್ ಮಾಡಿಸಿದರು” ಎಂದು ನನ್ನ ದೂರಿನಲ್ಲಾಗಲೀ ಅಥವಾ ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ಮೇಲ್ಕಂಡ ವಿಚಾರಗಳನ್ನು ನಾನು ಹೇಳದೇ ಇದ್ದರೂ ಕೂಡ ಹೇಳಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.



8. ಪೊಲೀಸರು ಸ್ಥಳಕ್ಕೆ ಬಂದು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನಾಗಲೀ ನನ್ನ ಕುಟುಂಬದವರಾಗಲೀ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ. ಆಸ್ತಿ ನನ್ನದ್ದಲ್ಲ ಪಂಚಾಯಿತಿಗೆ ಸೇರಿದ್ದು ಎಂಬ ವಿಷಯ ತಿಳಿದಿದ್ದರೂ ಕೂಡ ಯಾವುದೇ ಘಟನೆ ನಡೆಯದೇ ಇದ್ದರೂ ಆಸ್ತಿಯನ್ನು ಲಪಟಾಯಿಸಿಕೊಳ್ಳುವ ದೃಷ್ಟಿಯಿಂದ ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ.ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.